ನಾನು ಸಾಯುವುದಾಗಿದ್ದರೆ ಯಾರಿಗೂ ತೊಂದರೆ ಉಂಟಾಗದಂತೆ ಏನಾದರೂ ಒಂದು ದಾರಿಯನ್ನು ಕಂಡು ಹಿಡಿಯುತ್ತೇನೆ.' ಅಪ್ಪಾವ್ರ ಗಂಟಲು ಕಟ್ಟಿದಂತಾಯಿತು.

'ಅಮ್ಮ ಅಡಿಗೆಯಲ್ಲಾ ತಣ್ಣಗಾಯಿತು' ಮಗಳು ಬಾಗಿಲ ಹೊಸ್ತಿಲ ಬಳಿ ಬಂದು ಹೇಳಿದಳು. ಅದನ್ನು ಕೇಳಿದಾಗ ಅಪ್ಪ ಹೇಳಿದರು, 'ಈ ಹಟ ಬಿಟ್ಟು ಬಿಟ್ಟು ನೀವು ಒಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತೀರೋ ಅಥವಾ...'

ಅನಂತರ ಅವರು ಕುರ್ಚಿಯಿಂದೆದ್ದು ಸಡಿಲವಾಗಿದ್ದ ಮುಂಡನ್ನು ಸರಿ ಮಾಡಿಕೊಳ್ಳುತ್ತಾ, 'ನಾನು ಹೇಳಿದಂತೆ ಕೇಳುವುದು ನಿಮಗೆ ಒಳ್ಳೆಯದು. ಅಲ್ಲದಿದ್ದಲ್ಲಿ ಈ ಮಳೆಯಲ್ಲೇ ನಾನು ಇಳಿದು ನಡೆದುಕೊಂಡು ಹೊರಟು ಹೋಗುತ್ತೇನೆ. ಊಟ ಮಾಡದೆ ಈ ಚಳಿಯಲ್ಲಿ ನಾನು ಹೋಗುವುದು ನಿಮಗೆ ಇಷ್ಟವಲ್ಲವೇ? ರಸ್ತೆಗೆ ಹೋಗಿ ನಾಯಿಯಂತೆ ಸಾಯುವುದನ್ನು ನೋಡಲೂ ಇಷ್ಟವೇನು?'

ಬಾಗಿಲನ್ನು ಒರಟಾಗಿ ಹಾಕಿ ದೀಪ ಆರಿಸಿ ಮಳೆಗಾಳಿಯಲ್ಲಿ ನೆಂದಿದ್ದ ಆರಾಮ ಕುರ್ಚಿಯಲ್ಲಿ ಪುನಃ ಕುಳಿತು ಅಪ್ಪ ಕಿಸೆಯನ್ನು ತಡವಿ ನೋಡಿದರು. ಚುಟ್ಟ ಮುಗಿದಿತ್ತು. ಕುರ್ಚಿಯ ಸುತ್ತಲೂ ಚೆದುರಿ ಬಿದ್ದಿದ್ದ ಚುಟ್ಟದ ತುಂಡುಗಳಿಂದ ಒಂದನ್ನು ಬಗ್ಗಿ ತೆಗೆದುಕೊಂಡು ಪ್ರಯಾಸದಿಂದ ಹತ್ತಿಸಿ ಸೇದ ತೊಡಗಿದರು.

## ಎಂ. ಮುಕುಂದನ್

ಮಲಯಾಳಂ ಭಾಷೆಯ ವಿಶಿಷ್ಟ ಲೇಖಕ ಮುಕುಂದನ್, ಹಿಂದೆ ಫ್ರೆಂಚ್ ವಸಾಹತು ಆಗಿದ್ದ ಮಾಹೆಯ (ಮಯ್ಯಳಿ) ಅಂತಃಪ್ರಜ್ಞೆಯನ್ನು ತಮ್ಮ ಕತೆ, ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ. ಅವರ ಬರಹಗಳಲ್ಲಿ ಹುಟ್ಟೂರಾದ ಮಯ್ಯಳಿಯ ಪರಿಸರಕ್ಕೆ ವಿಶೇಷ ಸ್ಥಾನವಿದೆ.

ಹದಿನೈದಕ್ಕೂ ಹೆಚ್ಚು ಕಾದಂಬರಿಗಳನ್ನು, ಹತ್ತಕ್ಕೂ ಹೆಚ್ಚು ಕಥಾಸಂಕಲನಗಳನ್ನು ಪ್ರಕಟಿಸಿರುವ ಮುಕುಂದನ್ ಅವರದು ಮಲಯಾಳಂ ಸಾಹಿತ್ಯ ಕ್ಷೇತ್ರದಲ್ಲಿ ಮುಖ್ಯ ಹೆಸರು. ಅವರ 'ದೈವತ್ತಿಂಡೆ ವಿಕೃತಿಗಳ್' ಎಂಬ ಕಾದಂಬರಿಯನ್ನು 'ದೇವರ ವಿಕಾರಗಳು' ಎಂಬ ಹೆಸರಿನಲ್ಲಿ ನಾ. ದಾಮೋದರಶೆಟ್ಟಿ ಕನ್ನಡಕ್ಕೆ ಅನುವಾದಿಸಿದ್ದಾರೆ.

## ಎಂ.ಎಸ್. ಲಕ್ಷ್ಮಣಾಚಾರ್

ಕಳೆದ ನಾಲ್ಕೂವರೆ ದಶಕಗಳಿಂದ ಕನ್ನಡ ಮತ್ತು ಮಲಯಾಳಂ ಸಾಹಿತ್ಯದ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತಿರುವ ಲಕ್ಷ್ಮಣಾಚಾರ್ ತುಮಕೂರು ಜಿಲ್ಲೆಯ ಗುಬ್ಬಿಯವರು. ಕೇಂದ್ರ ಸರ್ಕಾರದ ಅಧಿಕಾರಿಯಾಗಿ ಕಾಸರಗೋಡಿನಲ್ಲಿ ಮತ್ತು ಕೋಯಿಕ್ಕೋಡ್‌ನಲ್ಲಿ ಕೆಲಸ ಮಾಡಿದ್ದಾರೆ. ಅವರು ಅನುವಾದಿಸಿದ ನೀಲಕಂಠ ಪಿಳ್ಳೆ ಅವರ 'ಗೌರಿ', ಮಲಯಾಟ್ಟೂರ್ ರಾಮಕೃಷ್ಣನ್ ಅವರ 'ಐದುಸೆಂಟು' ಕಾದಂಬರಿಗಳು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿವೆ. ಪೆರುಂಬಡವಂ ಶ್ರೀಧರನ್ ಅವರ 'ಅಭಯ', 'ಒಂದು ಸಂಕೀರ್ತನದಂತೆ' ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಬಿ.ವಿ. ವೈಕುಂಠರಾಜು ಅವರ 'ಉದ್ಭವ', ಅನುಪಮಾ ನಿರಂಜನ ಅವರ 'ಋಣ' ಸೇರಿದಂತೆ ಅನೇಕ ಪುಸ್ತಕಗಳನ್ನು ಮಲಯಾಳಂಗೆ ಅನುವಾದಿಸಿದ್ದಾರೆ. ಪ್ರಸ್ತುತ ಭದ್ರಾವತಿಯಲ್ಲಿ ನೆಲೆಸಿದ್ದಾರೆ.